



# ಕಪ್ಪು ಗುಲಾಬಿ



## ಪ್ರೇಮಿಗಳು ಪರಸ್ಪರ ಸಿಟ್ಟಿಗೆದ್ದರೆ ಈ ಕಪ್ಪು ಗುಲಾಬಿ ಕೊಡಬಹುದೆ?

■ ವಿನಯ್‌ಕುಮಾರ್ ಬಿ.ಎಚ್.

ಕೆಂಪು, ಬಿಳಿ, ಗುಲಾಬಿ, ಹಳದಿ ಬಣ್ಣದ ಗುಲಾಬಿ ಹೂಗಳು ಸಾಮಾನ್ಯ. ಆದರೆ ಸ್ವಾಭಾವಿಕವಾಗಿಯೇ ಬೆಳೆದ ಕಪ್ಪು ವರ್ಣದ ಗುಲಾಬಿ ಹೂಗಳು ಇವೆಯೆ!?

ಟರ್ಕಿಯ ಹ್ಯಾಲ್ಫಟಿ ಎಂಬ ಪುಟ್ಟಹಳ್ಳಿಯಲ್ಲಿ ಈ ಕಪ್ಪು ಗುಲಾಬಿ ಹುಲುಸಾಗಿ ಬೆಳೆಯುತ್ತದೆ. ಗುಲಾಬಿಗೆ ಯಾರೋ ಕಡುಕಪ್ಪು ಬಣ್ಣವನ್ನು ಢಾಳಾಗಿ ಸಿಂಪಡಿಸಿದ್ದಾರೆಯೋ ಎಂಬಂತೆ ಈ ಕಪ್ಪು ಗುಲಾಬಿಗಳು ಕಾಣಿಸುತ್ತವೆ. ಈ ಹೂವಿನಲ್ಲಿ ಬಣ್ಣವನ್ನು ಹೊರತು ಪಡಿಸಿದರೆ ಬೇರೆಲ್ಲವೂ ಇತರ ಗುಲಾಬಿಗಳಂತೆಯೇ ಇದೆ.

ಈ ಹೂವುಗಳ ವಿಶೇಷ ಎಂದರೆ ಬೇಸಿಗೆ ಕಾಲದಲ್ಲಿ ಮಾತ್ರ ಕೆಲವೇ ಕೆಲವು ಹೂಗಳು ಅರಳುವುದು! ಹ್ಯಾಲ್ಫಟಿಯ ವಿಶಿಷ್ಟ ಮಣ್ಣು ಹಾಗೂ ಹಳ್ಳಿಯ ಸಮೀಪದಲ್ಲಿ ಹರಿಯುವ ಯೂಫ್ರಟಿಸ್ ನದಿಯ ಅಂತರ್ಜಲವೇ ಇದಕ್ಕೆ ಕಾರಣವಂತೆ. ಅಂದ ಹಾಗೆ ಈ ಹೂಗಳು ಕೆಂಪು ಗುಲಾಬಿಗಳೇ. ವಸಂತ ಮಾಸದಲ್ಲಿ ಈ ಹೂವುಗಳು ಗಾಢ ಕೆಂಪು ಬಣ್ಣದಲ್ಲಿಯೇ ಇರುತ್ತವೆ. ಆದರೆ ಬೇಸಿಗೆಯಲ್ಲಿ ಮಾತ್ರ ಕಡುಗಪ್ಪು ವರ್ಣಕ್ಕೆ ತಿರುಗುತ್ತವೆ.

ಸ್ಥಳೀಯರು ಇದನ್ನು ಪ್ರೀತಿ ಮತ್ತು ದ್ವೇಷಗಳ ನಡುವಣ ಸಂಬಂಧವೆಂದು ಅರ್ಥೈಸುತ್ತಾರೆ. ಅಪರೂಪದ ಈ ಗುಲಾಬಿಗಳು ನಿಗೂಢತೆ, ಭರವಸೆ, ಭಾವೋದ್ರೇಕಗಳ ಸಂಕೇತ ಎಂದೂ ಹೇಳಲಾಗುತ್ತದೆ. ಕೆಲವರು ಈ ಗುಲಾಬಿಗಳು ಸಾವು ಮತ್ತು ಕೆಟ್ಟ ವರ್ತಮಾನದ ಸೂಚಕ ಎಂದೂ ಭಾವಿಸುತ್ತಾರೆ.

1990ರಲ್ಲಿ ಬೈರೆಸಿಕ್ ಅಣೆಕಟ್ಟನ್ನು ನಿರ್ಮಿಸಿದ ಬಳಿಕ ಈ ಕಪ್ಪು ಗುಲಾಬಿಗಳ ಸಂಖ್ಯೆ ಕ್ಷೀಣಿಸಿತು. ಅಣೆಕಟ್ಟನ್ನು ಕಟ್ಟುವಾಗ, ಹಳೆಯ ಹ್ಯಾಲ್ಫಟಿ ಗ್ರಾಮ ಮುಳುಗಡೆಯಾಯಿತು. ಅಲ್ಲಿನ ಜನರಿಗೆ 10 ಕಿ.ಮೀ ದೂರದ ಕರೋಟ್ಲಾಕ್ ಎಂಬಲ್ಲಿ ಪುನರ್‌ವಸತಿ ವ್ಯವಸ್ಥೆ ಮಾಡಲಾಯಿತು. ಹಳ್ಳಿಗರು ಈ ಗುಲಾಬಿ ಗಿಡಗಳನ್ನು ತಮ್ಮ ಹೊಸ ಗ್ರಾಮದ ಹಿತ್ತಿಲಲ್ಲಿ ನೆಟ್ಟು ಪೋಷಿಸಿದರೂ ಅವು ಹೊಸ ವಾತಾವರಣಕ್ಕೆ ಹೊಂದಿಕೊಳ್ಳಲಿಲ್ಲ. ಈ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿಗಳು ನಶಿಸುತ್ತಿರುವ ಗುಲಾಬಿ ಗಿಡಗಳನ್ನು ಸಂಗ್ರಹಿಸಿ ಮುಳುಗಡೆಯಾದ ಊರಿನ ಸುತ್ತಮುತ್ತಲ ಸ್ಥಳದಲ್ಲೇ ಗ್ರೀನ್‌ಹೌಸ್‌ನಲ್ಲಿ ನೆಟ್ಟು ಪೋಷಿಸಲು ವ್ಯವಸ್ಥೆ ಮಾಡಿದರು. ಆ ಹವಾಗುಣದಲ್ಲಿ ಮತ್ತೆ ಕಪ್ಪುಗುಲಾಬಿಗಳು ನಳನಳಿಸಿದವು!

ಪ್ರೇಮದ ಸಂಕೇತವಾದ ಗುಲಾಬಿಯನ್ನು ಕಪ್ಪು ಬಣ್ಣದಲ್ಲಿ ಕಲ್ಪಿಸಿಕೊಳ್ಳುವುದೇ ಕಷ್ಟ. ಈ ಅಪರೂಪದ ಕಪ್ಪು ಗುಲಾಬಿಗಳನ್ನು ನೋಡುವುದೂ ಒಂದು ವಿಶಿಷ್ಟ ಅನುಭವ. ಪರಸ್ಪರ ಪ್ರೇಮಿಸುವವರು ಒಬ್ಬರ ಮೇಲೊಬ್ಬರು ಸಿಟ್ಟಿಗೆದ್ದಾಗ ಈ ಕಪ್ಪು ಗುಲಾಬಿ ಹೂಗಳನ್ನು ವಿನಿಮಯ ಮಾಡಿಕೊಂಡರೆ ಹೆಚ್ಚು ಅರ್ಥಪೂರ್ಣವಾಗಬಹುದೇನೊ? ಅಂದ ಹಾಗೆ ಟರ್ಕಿಗೆ ಭೇಟಿ ಕೊಟ್ಟರೆ ಈ ಕಪ್ಪು ಗುಲಾಬಿಗಳನ್ನು ನೋಡುವುದು ಮರೆಯಬೇಡಿ.